ಇ) ಅವಶ್ಯಕತೆ ಅನುಸಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುವರು.

ಈ) ಈಗಾಗಲೇ 19 ಮೇವು ಬ್ಯಾಂಕ್‌ಗಳನ್ನು ತೆರೆಯಲಾಗಿದೆ. ಅವಶ್ಯಕತೆಗೆ ತಕ್ಕಂತೆ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವರು

ರಾಜ್ಯದಲ್ಲಿ ಜಾನುವಾರುಗಳ ಹಾಗೂ ಮೇವಿನ ಕುರಿತು

3104 (3440) : ಶ್ರೀ ಕೃಷ್ಣಮೂರ್ತಿ.ಎ.ಆರ್ (ಸಂತೇಮರಳ್ಳಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಸು,ಎಮ್ಮೆ,ಕುರಿ,ಮೇಕೆ ಹಾಗೂ ಇತರೆ ಜಾನುವಾರುಗಳ ಸಂಖ್ಯೆ ಎಷ್ಟು; ಸದರಿ ಜಾನುವಾರುಗಳ ಸಂಖ್ಯೆ ಎಷ್ಟು; ಸದರಿ ಜಾನುವಾರುಗಳಿಗೆ ಪ್ರತಿ ಜಾನುವಾರಿಗೆ ಪ್ರತಿ ವರ್ಷಕ್ಕೆ ಎಷ್ಟು ಮೇವು ಅಗತ್ಯ ಇರುತ್ತದೆ; ವಿವರ ನೀಡುವುದು;

ಆ) ರಾಜ್ಯದಲ್ಲಿ ಜಾನುವಾರುಗಳಿಗೆ ಸಾಕಾಗುವಷ್ಟು ಮೇವು ಈ ಸಾಲಿನಲ್ಲಿ ಲಭ್ಯವಾಗಿದೆಯೇ; ಇಲ್ಲದಿದ್ದಲ್ಲಿ, ಪಶುಸಂಗೋಪನಾ ಇಲಾಖೆಯಿಂದ ಜಾನುವಾರುಗಳ ಮೇವಿಗಾಗಿ ಕೈಗೊಳ್ಳಲಾಗಿರುವ ಕ್ರಮ ಏನು? ಕೈಗೊಳ್ಳದಿದ್ದಲ್ಲಿ, ಕ್ರಮ ಏನು? ಕೈಗೊಳ್ಳದಿದ್ದಲ್ಲಿ, ಕಾರಣ ಏನು?

ಇ) ಹಾಲು ಒಕ್ಕೂಟದ ಮೂಲಕ ಹಸು–ಎಮ್ಮೆಗಳಿಗೆ ಮೇವು ವಿತರಣೆ ಮಾಡಲು ಇಲಾಖೆಯು ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ ಕಾರಣ ಏನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) 1997 ಜನುವಾರು ಗಣತಿ ವಿವರ ಈ ಕೆಳಕಂಡಂತಿದೆ.

ದನಗಳು	108.31
ಎಮ್ಮೆಗಳು	43.46
ಕುರಿಗಳು	80.03
ಮೇಕೆಗಳು	48.75
ಒಟ್ಟು	**280.76** ಲಕ್ಷ

ಜಾನವಾರುಗಳಿಗೆ ಬರಪರಿಸ್ಥಿತಿಯಲ್ಲಿ ಒಂದಕ್ಕೆ ಪ್ರತಿದಿನ 5–7 ಕೆ.ಜಿ. ಹಾಗೂ ವರ್ಷಕ್ಕೆ 2 ಟನ್ನಳಷ್ಟು ಒಣಮೇವು ಬೇಕಾಗುತ್ತದೆ.

ಆ) ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮೇವಿನ ಕೊರತೆ ಇದೆ. ಕೊರತೆಯನ್ನು ನೀಗಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ರೈತರು ಸಾಗಾಣಿಕೆ ಮಾಡುವ ಮೇವಿನ ಸಾಗಾಣಿಕೆಗಾಗಿ ಸಹಾಯಧನ	ರೂ.48.00ಲಕ್ಷಗಳು
ನೀರಾವರಿ ಸೌಲಭ್ಯವಿರುವ ರೈತರಿಗೆ ಮೇವು ಬೀಜದ ಕಿರುಪೊಟ್ಟಣಗಳನ್ನು ಉಚಿತವಾಗಿ ವಿತರಿಸಲು	ರೂ.100.00ಲಕ್ಷಗಳು
ಸರ್ಕಾರಿ ಕ್ಷೇತ್ರಗಳಲ್ಲಿ ಮೇವು ಬೆಳೆಸಲು	ರೂ.227.00ಲಕ್ಷಗಳು
ಮೇವು ಬ್ಯಾಂಕ್/ಗೋಶಾಲೆಗಳನ್ನು ಪ್ರಾರಂಭಿಸಲು	ರೂ.300.00ಲಕ್ಷಗಳು

ಔಷಧಿಖರೀದಿ ರೂ.300.00ಲಕ್ಷಗಳು

19 ಮೇವು ಬ್ಯಾಂಕ್‌ಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಜಿಲ್ಲಾ	ತಾಲ್ಲೂಕ್	ಸ್ಥಳ
1. ಬಳ್ಳಾರಿ–6	ಹಗರಿಬೊಮ್ಮನ ಹಳ್ಳಿ	ಹಗರಿಬೊಮ್ಮನಹಳ್ಳಿ–ಮುಚ್ಚಿದ
	ಕೂಡ್ಲಗಿ	ಕೂಡ್ಲಗಿ–ಮುಚ್ಚಿದೆ
	ಕೂಡ್ಲಗಿ	ಕೊಟ್ಟೂರು–ಮುಚ್ಚಿದೆ
	ಕೂಡ್ಲಗಿ	ಉಜ್ಜನಿ–ಮುಚ್ಚಿದೆ
	ಹಡಗಲಿ	ಹಡಗಲಿ–ಮುಚ್ಚಿದೆ
	ಹಡಗಲಿ	ಹಿರೆಹಡಗಲಿ–ಮುಚ್ಚಿದೆ
2. ಚಿತ್ರದುರ್ಗ–8	ಚಳ್ಳಕೆರೆ	ಕುದಾಪುರ
	ಚಳ್ಳಕೆರೆ	ಉಳ್ಳವರ್ತಿ
	ಹಿರಿಯೂರು	ಬಬ್ಬೂರು
	ಕಸಬ	ಚಿಕ್ಕಸಿದ್ದಪ್ಪನಹಳ್ಳಿ
	ಹೊಳಲ್‌ಕೆರೆ	ಸೀಬಾರ
	ಮೊಳಕಾಲ್ಮೂರು	ಗುಂದೇರಿ
	ಹೊಸದುರ್ಗ	ರಾಯಪುರ
	ಹೊಸದುರ್ಗ	ಹೊಸದುರ್ಗ
3. ಕೊಪ್ಪಳ–1	ಕೊಪ್ಪಳ	ಮುನಿರಾಬಾದ್–ಮುಚ್ಚಿದೆ
4. ತುಮಕೂರು–2	ಕೊರಟಗೆರೆ	ಕೊರಟಗೆರೆ–ಮುಚಿದೆ
	ತಿಪಟೂರು	ತಿಪಟೂರು
5. ಗುಲ್ಬರ್ಗಾ–2	ಸೇಡಂ	
	ಚಿತ್ತಾಪುರ	ಗುಂಡಗುತ್ತಿ

ಪ್ರಾರಂಭಿಕವಾಗಿ ಪಂಜಾಬ್ ರಾಜ್ಯದಿಂದ 6 ರೈಲುಗಾಡಿ ಮೇವವನ್ನು ಖರೀದಿಸಲು ನಿರ್ಧರಿಸಲಾಗಿದೆ. ಈ ರೈಲುಗಾಡಿಗಳನ್ನು ಕೋಲಾರ (2 ರೈಲುಗಾಡಿ) ತುಮಕೂರು, ಕೊಪ್ಪಳ, ಚಿತ್ರದುರ್ಗ ಮತ್ತು ಗದಗ (ತಲಾ ಒಂದು ರೈಲುಗಾಡಿ) ಜಿಲ್ಲೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಒಂದು ರೈಲುಗಾಡಿಗೆ ಸುಮಾರು 320 ಟನ್ ಮೇವನ್ನು ನಿರೀಕ್ಷಿಸಲಾಗಿದೆ.

ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗವಾಗದಂತಹ ಮಂಡ್ಯ ಜಿಲ್ಲೆಯ ಕಬ್ಬನ್ನು ಒಂದು ಟನ್ನಿಗೆ ರೂ.600.00ಗಳ ದರದಲ್ಲಿ ಖರೀದಿಸಲು ನಿರ್ಧರಿಸಲಾಗಿದೆ. ಈ ನಿರ್ಣಯವು ಮಂಡ್ಯ ಜಿಲ್ಲೆಯ ರೈತರಿಗೂ ಮತ್ತು ಬರಪೀಡಿತ ಜಿಲ್ಲೆಗಳ ಜಾನುವಾರುಗಳಿಗೂ ಫಲಪ್ರದವಾಗಿರುತ್ತದೆ. ದಿನಾಂಕ: 8.7.2003ರವರೆಗೆ ಸರಬರಾಜು ಮಾಡಿರುವ ಕಬ್ಬಿನ ಪ್ರಮಾಣ ಈ ಕೆಳಕಂಡಂತಿದೆ.

1 ಕೋಲಾರ	337 ಟನ್
2 ತುಮಕೂರು	15 ಟನ್
3 ಕೊಪ್ಪಳ	724 ಟನ್
ಒಟ್ಟು	1076 ಟನ್

ಇತರೆ ಪ್ರದೇಶಗಳಿಂದ ಲಭ್ಯವಿರಬಹುದಾದ ಅನುಪಯೋಗಿ ಹೆಚ್ಚುವರಿ ಕಬ್ಬನ್ನು ಜಿಲ್ಲಾಧಿಕಾರಿಗಳು ಖರೀದಿಸಬಹುದಾಗಿದೆ.

ಇ) –ಇಲ್ಲ

–ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಗೋ ಶಾಲೆಗಳನ್ನು ತೆರೆಯುವುದು

3118 (3782) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ. (ತಿಕೋಟ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬರಗಾಲ ಸಂಭವಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ ಬರಗಾಲ ಉದ್ಭವಿಸಿದೆ;

ಇ) ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಗಳಲ್ಲಿ ಇರುವ ಜಾನುವಾರುಗಳ ಸಂಖ್ಯೆ ಎಷ್ಟು; ಸರ್ಕಾರ ಈ ಜಾನುವಾರುಗಳ ಸಂರಕ್ಷಣೆಗಾಗಿ ಗೋಶಾಲೆಗಳನ್ನು ತೆರೆದಿದೆಯೇ;

ಈ) ಹಾಗಾದರೆ ರಾಜ್ಯದ ಯಾವ ಪ್ರದೇಶಗಳಲ್ಲಿ ಗೋಶಾಲೆಗಳನ್ನು ಆರಂಭಿಸಲಾಗಿದೆ; ಆರಂಭಿಸದೇ ಇದ್ದಲ್ಲಿ ಪ್ರತಿ ಹೋಬಳಿ ಪ್ರದೇಶಕ್ಕೆ ಒಂದರಂತೆ ಗೋಶಾಲೆ ತೆರೆಯಲು ಕ್ರಮ ಕೈಗೊಳ್ಳಲಾಗುವುದೇ;

ಉ) ಯಾವ ಕಾಲಮಿತಿಯಲ್ಲಿ ತೆರೆಯಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಬಂದಿದೆ.

ಆ) ಅನುಬಂಧ–1 ರಲ್ಲಿ ನೀಡಲಾಗಿದೆ

ಇ) ಅನುಬಂಧ–2ರಲ್ಲಿ ನೀಡಲಾಗಿದೆ ಅವಶ್ಯವಿದ್ದೆಡೆಯಲ್ಲಿ ಈಗಾಗಲೇ ತೆರೆಯಲಾಗಿದೆ

ಈ) ಕೊಪ್ಪಳ ಜಿಲ್ಲೆ– 3
ಗದಗ ಜಿಲ್ಲೆ– 4
ತುಮಕೂರು ಜಿಲ್ಲೆ– 2
ಬಿಜಾಪುರ ಜಿಲ್ಲೆ– 2
ಕೋಲಾರ ಜಿಲ್ಲೆ– 5
ಒಟ್ಟು 16 ಗೋಶಾಲೆಗಳನ್ನು ತೆರೆಯಲಾಗಿದೆ

ತುಮಕೂರು ಮತ್ತು ಕೋಲಾರ ಜಿಲ್ಲೆಯ ಗೋಶಾಲೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಅವಶ್ಯಕತೆಗನುಗುಣವಾಗಿ ಗೋಶಾಲೆಗಳನ್ನು ಪ್ರಾರಂಭಿಸಲು ಕ್ರಮ ಸಂಬಂದಪಟ್ಟ ಜಿಲ್ಲಾಧಿಕಾರಿಗಳು ಕೈಗೊಳ್ಳುತ್ತಾರೆ.

ಉ) ಅವಶ್ಯಕತೆಗೆ ಅನುಗುಣವಾಗಿ

ಸರ್ಕಾರದ ಘೋಷಣೆಯಂತೆ ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿ ಉದ್ಭವಿಸಿರುವ ಜಿಲ್ಲೆಗಳ ವಿವರ.

ಕ್ರ.ಸಂ	ಜಿಲ್ಲೆಗಳು
1.	ಬೆಂಗಳೂರು ನಗರ
2.	ಬೆಂಗಳೂರು ಗ್ರಾಮಾಂತರ
3.	ಕೋಲಾರ